ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಎಸ್.ಡಿ. ವಕೀಲರಿಂದ:</u>

ನಾನು ಶಿಕ್ಷಣ ಪಡೆದಿರುವುದಿಲ್ಲ. ಮಾರಾಪೂರ ಗ್ರಾಮದ ಮಾಂಗ ಕುಟುಂಬದ ಬಗ್ಗೆ ನನಗೆ 2-3 ವರ್ಷಗಳಿಂದ ಗೊತ್ತಿರುತ್ತದೆ. ಸಾಕ್ಷಿ ಮುಂದುವರೆದು 10-15 ವರ್ಷಗಳಿಂದ ಗೊತ್ತು ಎಂದು ಹೇಳುತ್ತಾರೆ. ಮಾಂಗ ಮನೆತನದ ಬಗ್ಗೆ 10-15 ವರ್ಷಗಳ ಮೊದಲು ಆಗಿರುವ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಲಕ್ಷ್ಮಣ ಮಾಂಗ ಮತ್ತು ಅವರ ಹೆಂಡತಿ ನಾಗವ್ವ ಸುಮಾರು 20 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ಲಕ್ಷ್ಮಣ ಮಾಂಗ ಇವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ ಮಾಂಗ ಮನೆತನದ ವಂಶಾವಳಿ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಂಶಾವಳಿಯನ್ನು ಯಾವ ಆಧಾರದ ಮೇಲೆ ಬರೆದಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯಲ್ಲಿ ತೋರಿಸಿದ ವಂಶಾವಳಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಈರಪ್ಪನ ಮಗಳಾದ ನಾಗವ್ವ ದೇವದಾಸಿಯಾಗಿದ್ದಳು ಎಂದರೆ ಸರಿ. ಸದರಿ ನಾಗವ್ವ ಇವರಿಗೆ ಯಾವುದೇ ಮಕ್ಕಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಶಾಂತವ್ವ ಇವರು ಸದರಿ ನಾಗವ್ವಳ ಮಗಳು ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯ ಪ್ರಕಾರ ಡೈರಿ ನಂ.1160 ರ ಪ್ರಕಾರ ವಾದಿಯ ಹೆಸರು ಸಾಮೂಹಿಕವಾಗಿ ಪಹಣಿ ಪತ್ರಿಕೆಯಲ್ಲಿ ನಮೂದಗಿರುತ್ತದೆ. ನಿಪಿ-3 ರ ಪ್ರಕಾರ ಶಾಂತವ್ವ ಲಕ್ಷ್ಮಣ ಆಡೆಕರ, ಮುತ್ತಪ್ಪ ತಂದೆ ಯಲ್ಲಪ್ಪ ಮಾಂಗ ಇವರ ಮಗಳು ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಪಿ-3 ರ ದಾಖಲೆ ಸುಳ್ಳಿನಿಂದ ಕೂಡಿರುತ್ತದೆ. ನಿಪಿ-3 ರ ಖೊಟ್ಟಿ ದಾಖಲೆಯ ಆಧಾರದ ಮೇಲೆ ವಾದಿ ತನ್ನ ಹೆಸರು ಪಹಣಿ ಪತ್ರಿಕೆಗಳಲ್ಲಿ ಸೇರಿಸಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಮತ್ತು ನಮ್ಮ ಮಧ್ಯೆ ಇನ್ನೊಂದು ಆಸ್ತಿಯ ಕುರಿತು ತಕರಾರು ಇರುವುದರಿಂದ ನಮ್ಮ ಮಧ್ಯೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನನ್ನ ವಿರುದ್ಧ ಮೂಲ ದಾವೆ ಸಂ.159/2025 ರಂತೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ ಪ್ರತಿವಾದಿಯರು ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ

ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಮ್ಮ ಮಧ್ಯೆ ತಕರಾರು ಇರುವುದರಿಂದ ವಾದಿಯ ಹೇಳಿಕೆಯ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿಯರ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.03.06 15:57:27 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ

ಅಸಲು ದಾವಾ.ನಂ. 224/2022
ಪಿ ಡಬ್ಲ್ಯೂ-3

ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಬಿ.ಎಸ್.ಡಿ. ವಕೀಲರಿಂದ:**

ನಾನು ಯಾವುದೇ ಶಿಕ್ಷಣ ಪಡೆದಿಲ್ಲ. ಮಾರಾಪೂರ ಗ್ರಾಮದ ಮಾಂಗ ಪರಿವಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಮಾಂಗ ಪರಿವಾರದ ಬಗ್ಗೆ ನನಗೆ ಸುಮಾರು 30 ವರ್ಷಗಳಿಂದ ಪರಿಚಯ ಇರುತ್ತದೆ. ಮೂಲ ಪುರುಷ ಲಕ್ಷ್ಮಣ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಿರಿಯರು ಕೂಡಿ ಬರೆಸಿರುತ್ತಾರೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಂಶಾವಳಿಯನ್ನು ಹಿರಿಯರು ಹೇಳಿ ಬರೆಸಿರುತ್ತಾರೆ. ನನಗೆ ಮಾಂಗ ಮನೆತನದ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ತಾಯಿ ನಾಗವ್ವಳ ಗಂಡನ ಹೆಸರು, ಅವರು ಯಾವ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರದೇ ಇದ್ದರೂ ಸಹ ವಾದಿಯ ಹೇಳಿಕೆಯ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.03.06 15:57:32 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾ.ದಂ.ಗಳು, ಬನಹಟ್ಟಿ